OS No. 138/2022 PW.1

ಅಸಲು ದಾವೆ ಸಂಖ್ಯೆ -138/2022
ಪಿ.ಡಬ್ಲ್ಯೂ - 01
ದಿನಾಂಕಃ 24-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ**

2 ನೇ ಪ್ರತಿವಾದಿಯ ಸಹೋದರ ಯಲ್ಲಪ್ಪ ರವರು ಯಾವಾಗ ಮರಣ ಹೊಂದಿದ್ದಾರೆ ಎಂದರೆ ನಾನು ಶಾಲೆ ಕಲಿತಿಲ್ಲ ಎಂದು ನುಡಿಯುತ್ತಾರೆ. 2 ನೇ ವಾದಿ ಎಲ್ಲಿ ಹುಟ್ಟಿದ್ದಾರೆ ಎಂದರೆ ಸರ್ಕಾರಿ ಆಸ್ಪತ್ರೆ ಹಾವೇರಿಯಲ್ಲಿ ಹುಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮದು ಹೆಸರೂರು ಗ್ರಾಮದ ಪಡಿತರ ಚೀಟಿ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಚುನಾವಣೆ ಮತವನ್ನು ಎಲ್ಲಿ ಚಲಾಯಿಸುತ್ತೀರಿ ಎಂದರೆ ಹೆಸರೂರು ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಯಲ್ಲಪ್ಪ ಯಾವ ಊರಿನಲ್ಲಿ ಮರಣ ಹೊಂದಿದ್ದಾರೆ ಎಂದರೆ ಲಕ್ಮೇಶ್ವರ ಊರಿನಲ್ಲಿ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿನಲ್ಲಿ ಹೆಸರೂರ ಗ್ರಾಮದಲ್ಲಿ ಯಾವುದೇ ಪಡಿತರ ಚೀಟಿ ಮತ್ತು ಚುನಾವಣೆ ಚೀಟಿ ಇಲ್ಲ ಎಂದರೆ ಇದೆ ಎಂದು ನುಡಿಯುತ್ತಾರೆ.

ನಿಮ್ಮ ಗಂಡನ ಮರಣ ಪ್ರಮಾಣ ಪತ್ರದಲ್ಲಿ ಆತನ ಹೆಂಡತಿ ಎಂದು ನಿಮ್ಮ ಹೆಸರು ದಾಖಲು ಮಾಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಲ್ಲಪ್ಪನಿಗೆ ಎಷ್ಟು ಜನ ಸಹೋದರ, ಸಹೋದರಿಯರು ಎಂದರೆ 3 ಜನ ಸಹೋದರರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂದಿತು ಎಂದು ಹೇಳಲು ಆಗುತ್ತದೆಯಾ ಎಂದರೆ ಗೋಣೆಪ್ಪ ರವರಿಂದ ಬಂದಿರುತ್ತದೆ. ಗೋಣೆಪ್ಪ ರವರಿಂದ 1 ನೇ ಪ್ರತಿವಾದಿಗೆ ಆಸ್ತಿ ಬಂದಿರುವ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಮುಂದುವರೆದು ಅದು ಗೋಣೆಪ್ಪರವರಿಂದ ಬಂದ ಆಸ್ತಿ ಎಂದು ನುಡಿಯುತ್ತಾರೆ. ಹಾಗಾದರೆ ದಾವಾ ಆಸ್ತಿಯು ಯಾವ ನಾತೆಯಿಂದ ಬಂದಿದೆ ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ಕೂಡಿ ಇದ್ದಾರೆ ಎಂದರೆ ಸರಿ.

ನೀವು ಯಾವ ಊರಿನಲ್ಲಿ ಇರುತ್ತೀರಿ ಎಂದು ದಾವೆಯಲ್ಲಿ ಬರೆಯಿಸಿದ್ದೀರಿ ಎಂದರೆ ಹೆಸರೂರ ಗ್ರಾಮ ಎಂದು ಬರೆಸಿದ್ದೇನೆ. ದಾವೆ ಹೂಡುವ ಕಾಲಕ್ಕೆ ನೀವು ರಾಮಾಪುರದಲ್ಲಿ ಇದ್ದೀರಿ ಎಂದು ಬರೆಸಿದ್ದೀರಿ ಎಂದರೆ ಸರಿ. ಹೆಸರೂರ ನಿಂದ ರಾಮಾಪುರ ಎಷ್ಟು ದೂರ ಎಂದರೆ ಅಂದಾಜು 10 ಕಿ ಮೀ ದೂರ ಇದೆ. 22 ಕಿ ಮೀ ಆಗುತ್ತದೆ ಎಂದರೆ ಹೌದು ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಸ್ವಂತ ಆಸ್ತಿಗೆ ಸಂಬಂಧಪಟ್ಟಂತೆ 2 ಮತ್ತು 3 ನೇ ಪ್ರತಿವಾದಿಯರು ದಾವೆ ಹೂಡಿ ರಾಜಿಯಾಗಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ರಾಜಿಯ ಬಗ್ಗೆ ನಿಮಗೆ ಇಂದಿಗೂ ಸಹ ಮಾಹಿತಿ ಇಲ್ಲವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತಾರದಲ್ಲಿ 2 ಮತ್ತು 3 ನೇ ಪ್ರತಿವಾದಿಯ ಹೆಸರುಗಳು ದಾಖಲಾಗುವ ಮುನ್ನ 1 ನೇ ಪ್ರತಿವಾದಿಯ ಹೆಸರು ಹೇಗೆ ದಾಖಲಾಯಿತು ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಇರುವುದರಿಂದ ಯಲ್ಲಪ್ಪನಿಗೆ ಆಗಲಿ ಅಥವಾ ಬೇರೆ ಯಾರಿಗೂ ಹಕ್ಕು ಇಲ್ಲ ಎಂದರೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಮಾಡಿಕೊಂಡ ರಾಜಿಯ ಬಗ್ಗೆ ನಿಮಗೆ ತಿಳಿದಿದ್ದರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜೀವಂತವಿದ್ದಾಗ ಅವರ ಸ್ವಂತ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಯಲ್ಲಪ್ಪ ಮತ್ತು ನಿಮಗಾಗಲೀ 1 ನೇ ಪ್ರತಿವಾದಿಯ ಆಸ್ತಿಯ ಮೇಲೆ ಹಕ್ಕು ಇಲ್ಲದೆ ಇದ್ದರು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಯಾವ ದಿನಾಂಕ, ತಿಂಗಳು, ವರ್ಷದಂದು ನೀವು ಹಿಸ್ಸೆ ಕೇಳಿರುತ್ತೀರಿ ಎಂದರೆ ನಾನು ಶಾಲೆ ಕಲಿತಿಲ್ಲ. ನೀವು ದಾವಾ ಆಸ್ತಿಯಲ್ಲಿ ಕಬ್ಜಾದಾರರು ಅಲ್ಲ ಮತ್ತು ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.